**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಶ್ರೀ ಕೆ.ಇ ಜಯರಾಂ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧದ ಶಿಸ್ತು ಕ್ರಮದ ಅಂತಿಮ ಆದೇಶ.

**ಓದಲಾಗಿದೆ:-**
1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರ ಪತ್ರ ಸಂಖ್ಯೆ:ಜಿಪಂಚಿಅ:2:ಸಿಬ್ಬಂದಿ:ಸಿಆರ್.33/2017-18, ದಿನಾಂಕ:22.10.2018.
2. ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 175 ವಿಸೇಬಿ 2018, ದಿನಾಂಕ:26.02.2019.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 175 ವಿಸೇಬಿ 2018, ದಿನಾಂಕ: 16.10.2019.
4. ಶ್ರೀ ಸಿ.ಆರ್. ಜಾವಿದ್ ಪಾಷ, ನಿವೃತ್ತ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿ ಇವರ ದಿನಾಂಕ: 22.06.2022ರ ವಿಚಾರಣಾ ವರದಿ.

****

**ಪ್ರಸ್ತಾವನೆ:**

ಶ್ರೀ ಕೆ.ಇ ಜಯರಾಂ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧ ಇವರ ಪತ್ನಿ ಶ್ರೀಮತಿ ಲತಾ ಇವರ ತಂಗಿಯಾದ ಕುಮಾರಿ ಮಮತಾ ಬಿನ್ ಲೇಟ್ ಮಾರಪ್ಪ ಇವರನ್ನು ಶ್ರೀ ಕೆ.ಇ ಜಯರಾಂ ಇವರು ಅತ್ಯಾಚಾರ ಮಾಡಿರುವುದಾಗಿ ಹಾಗೂ ಧರ್ಮಸ್ಥಳದಲ್ಲಿ ದಿನಾಂಕ:29.11.2017ರಂದು ಮದುವೆಯಾಗಿರುವುದಾಗಿ ಈ ಎಲ್ಲಾ ಪ್ರಕ್ರಿಯೆಗೆ ಅವರ ಅಕ್ಕನಾದ ಶ್ರೀಮತಿ ಲತಾ ಇವರು ಬೆಂಬಲ ನೀಡಿರುವುದಾಗಿ ಠಾಣಾಧಿಕಾರಿ, ಕೊಪ್ಪ ಪೊಲೀಸ್ ಠಾಣೆ, ಚಿಕ್ಕಮಗಳೂರು ಜಿಲ್ಲೆ ಇಲ್ಲಿ ಪ್ರಕರಣ ದಾಖಲಾಗಿದ್ದು, ಸದರಿ ಅಧಿಕಾರಿಯು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕರ್ತವ್ಯ ಲೋಪವೆಸಗಿರುವ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ 11ರಡಿ ಇಲಾಖಾ ವಿಚಾರಣೆ ನಡೆಸಲು ಉದ್ದೇಶಿಸಿ, ಆಪಾದಿತ ಅಧಿಕಾರಿಗೆ ಅನುಬಂಧ 1ರಿಂದ 4ರಲ್ಲಿ ದೋಷಾರೋಪಣ ಪಟ್ಟಿಯೊಂದಿಗೆ ಮೇಲೆ ಕ್ರಮ ಸಂಖ್ಯೆ(2)ರಲ್ಲಿ ಓದಲಾದ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು.

ಸರ್ಕಾರದ ಕಾರಣ ಕೇಳುವ ನೋಟೀಸ್‌ಗೆ ಆಪಾದಿತ ಅಧಿಕಾರಿ ಸಲ್ಲಿಸಿದ್ದ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿ, ಅವರುಗಳನ್ನು ದೋಷಾರೋಪ ಮುಕ್ತಗೊಳಿಸಲು ಪರಿಗಣಿಸಬಹುದಾದ ಯಾವುದೇ ಪೂರಕ ಅಂಶ/ದಾಖಲೆಗಳು ಕಂಡುಬಾರದೇ ಇದ್ದುದರಿಂದ ಅವರ ವಿರುದ್ಧದ ಆರೋಪಗಳ ಸತ್ಯಾ-ಸತ್ಯತೆಯನ್ನು ತಿಳಿಯುವ ಸಲುವಾಗಿ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ, ಶ್ರೀ ಜಾವಿದ್ ಪಾಷ, ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರು ಇವರನ್ನು ಪ್ರಕರಣದ ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿ ಮೇಲೆ ಕ್ರಮ ಸಂಖ್ಯೆ(3)ರಲ್ಲಿ ಓದಲಾದ ಸರ್ಕಾರದ ಆದೇಶವನ್ನು ಹೊರಡಿಸಲಾಗಿತ್ತು.

...2

ವಿಚಾರಣಾಧಿಕಾರಿಯವರು ಆರೋಪಿತ ಅಧಿಕಾರಿಯ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ವಿವರವಾದ ಇಲಾಖಾ ವಿಚಾರಣೆ ನಡೆಸಿ, ಈ ಕೆಳಕಂಡ ಕಾರಣದಿಂದ ಆಪಾದಿತರ ವಿರುದ್ಧದ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

- ಆರೋಪಿತ ಅಧಿಕಾರಿಯು ತಮ್ಮ ಲಿಖಿತ ಹೇಳಿಕೆಯಲ್ಲಿ ಕು॥ ಮಮತರವರಿಗೆ ಕನ್ನಡ ಭಾಷೆ ಗೊತ್ತಿರುವುದಿಲ್ಲ. ತೆಲಗು ಭಾಷೆ ಬಲ್ಲವರಾಗಿರುತ್ತಾರೆ. ಸದರಿಯವರು ತರ್ಜುಮೆ ಮಾಡಿದ ದಾಖಲೆಗಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.
- 1ನೇ ಸಾಕ್ಷಿದಾರರ ಮೌಖಿಕ ಹೇಳಿಕೆಗಳು ನಿರಾಧಾರವಾಗಿದೆ. ಹಾಜರುಪಡಿಸಿರುವ 3 ಫೋಟೋಗಳ ನೆಗೆಟೀವ್ ಹಾಜರುಪಡಿಸಿರುವುದಿಲ್ಲ. ಅವುಗಳನ್ನು ಸಾಕ್ಷಿ ಎಂದು ಪರಿಗಣಿಸಲಾಗದು.
- ಸದರಿ ಫೋಟೋದಲ್ಲಿ ಇರುವವರು ಮಮತ ಎಂದು ಗುರುತಿಸಲಾಗದು.
- ದಿ:20.04.2018 ರಂದು ಕೊಪ್ಪಕ್ಕೆ ಹೋಗಿ ಐಬಿ ಯಲ್ಲಿ ತಂಗಿರುವಾಗ ಲೈಂಗಿಕ ಕಿರುಕುಳ ನಡೆದಿರುವುದಕ್ಕೆ ಯಾವುದೇ ವೈದ್ಯಕೀಯ ಪ್ರಮಾಣ ಪತ್ರ ನೀಡಿರುವುದಿಲ್ಲ. ಸಾಕ್ಷಿದಾರರು ಸಲ್ಲಿಸಿರುವ 2 ರಿಂದ 7ರ ಸಾಕ್ಷಿಗಳನ್ನು ನಂಬಲು ಸಾಧ್ಯವಿಲ್ಲ.
- **ಮಮತರವರು ದಿನಾಂಕ:20.08.2021 ರಂದು ನಿಧನರಾಗಿರುತ್ತಾರೆ.** ಸಾಕ್ಷಿದಾರರ ಹೇಳಿಕೆಗಳು ಹಾಗೂ ದಾಖಲೆಗಳು ಸಮರ್ಪಕವಲ್ಲದ ದಾಖಲೆಗಳಾಗಿವೆ.
- ಆಪಾದಿತ ಅಧಿಕಾರಿಯ ಪತ್ನಿಯು ಯಾವುದೇ ದೂರು ನೀಡಿರುವುದಿಲ್ಲ. ಸದರಿಯವರು ಮಮತ ಇವರನ್ನು ತನ್ನ ಪತಿಯನ್ನು ವಿವಾಹವಾಗುವಂತೆ ಒತ್ತಾಯಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳಿರುವುದಿಲ್ಲ ಹಾಗೂ ವಿವಾಹ ನೋಂದಣಿಯಾಗಿರುವುದಿಲ್ಲ.
- ದೂರುದಾರರು ಮೃತರಾಗಿದ್ದರೂ ಅವರು ಬದುಕಿದ್ದಾಗ ಅವರು ನೀಡಿದ್ದ ಹೇಳಿಕೆಯಂತೆ ಆರೋಪಿತರು ಲೈಂಗಿಕ ಕಿರುಕುಳ ನೀಡಿರುವ ಬಗ್ಗೆ ಆರೋಪ ಕೈಬಿಡಲಾಗದು ಎಂದು ಮಂಡನಾಧಿಕಾರಿಯವರು ಮಂಡಿಸಿದ್ದು, ಇದಕ್ಕೆ ಪೂರಕವಾದ ಯಾವುದೇ ನ್ಯಾಯಾಲಯದ ಆದೇಶವನ್ನು ಉಲ್ಲೇಖಿಸಿರುವುದಿಲ್ಲ ಹಾಗೂ ದೂರುದಾರರು ನೀಡಿದ ಹೇಳಿಕೆ ಮೌಖಿಕವಾಗಿದ್ದು, ಯಾವುದೇ ರೀತಿ Material evidence ವಿಚಾರಣೆ ಸಮಯದಲ್ಲಿ ಹಾಜರುಪಡಿಸಿರುವುದಿಲ್ಲ.
- ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಚಿಕ್ಕಮಗಳೂರು ಸೆಷನ್ಸ್ ನ್ಯಾಯಾಲಯದಲ್ಲಿ ಎಸ್.ಸಿ 105/2018 ಕೊಪ್ಪ ಪೊಲೀಸ್ ವಿರುದ್ಧ ಶ್ರೀ ಕೆ.ಇ ಜಯರಾಂ ಮತ್ತು ಶ್ರೀಮತಿ ತಮ್ಮಕ್ಕ ಉರ್ಫ ಲತಾ ಪ್ರಕರಣದಲ್ಲಿ ಆರೋಪಿತನ ವಿರುದ್ಧ ಕಲಂ 376(2) (ಎಫ್), 376 (2) (ಕೆ), ಕಲಂ 370, 417, 114, 193, 194, 196, 323 ರೆಡ್ ವಿತ್ ಕಲಂ 34 ಐಪಿಸಿ ನಲ್ಲಿ ಪ್ರಕರಣ ದಾಖಲಿಸಿದ್ದು, ಇದರಲ್ಲಿಯೂ ಸಹ ದೂರುದಾರರು ಮಮತ ಆಗಿದ್ದು, ಮತ್ತು ಈ ಇಲಾಖಾ ವಿಚಾರಣೆಯಲ್ಲಿ ಇಲಾಖೆಯವರು ಸದರಿ ಕ್ರಿಮಿನಲ್ ಪ್ರಕರಣದ ದಾಖಲೆಗಳನ್ನುಸಲ್ಲಿಸಿರುತ್ತಾರೆ. ಅಲ್ಲದೇ, ಸದರಿ ಪ್ರಕರಣದಲ್ಲಿ ಪಿ.ಎಸ್.ಐ ಮತ್ತು ತನಿಖಾಧಿಕಾರಿಗಳನ್ನು ಈ ಪ್ರಕರಣದಲ್ಲಿ ಪಿಡಬ್ಲ್ಯು-6 ಮತ್ತು 7 ಎಂದು ವಿಚಾರಣೆ

...

ಮಾಡಲಾಗಿದೆ. ಸದರಿ ಪ್ರಕರಣದ ಸೆಷನ್ಸ್ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಆರೋಪಿತನ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳನ್ನು ತಿರಸ್ಕರಿಸಿ ಆರೋಪಿತರನ್ನು ಖುಲಾಸೆಗೊಳಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಕೆ.ಇ ಜಯರಾಂ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಒಪ್ಪಿ ಸರ್ಕಾರವು ಆರೋಪಿತ ಅಧಿಕಾರಿಯನ್ನು ಆರೋಪಗಳಿಂದ ಮುಕ್ತಗೊಳಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 70 ವಿಸೇಬಿ 2022**
**ಬೆಂಗಳೂರು, ದಿನಾಂಕ:29.08.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಕೆ.ಇ ಜಯರಾಂ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವ,ನಿ&ಮೇ) ನಿಯಮ-1957ರ ನಿಯಮ-11ರಡಿ **ದಿನಾಂಕ:26.02.2019ರಂದು** ಸರ್ಕಾರದಿಂದ ಜಾರಿಗೊಳಿಸಿದ ದೋಷಾರೋಪಣಾ ಪಟ್ಟಿಯಲ್ಲಿನ ಆರೋಪಗಳಿಂದ **ಆರೋಪ ಮುಕ್ತಗೊಳಿಸಿ** ಆದೇಶಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

**(ಬಾಲಪ್ಪ)**
**ಸರ್ಕಾರದ ಅಧೀನ ಕಾರ್ಯದರ್ಶಿ, (ಸೇ.ಬಿ & ಸಿ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.**

29/08/22

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಮಗಳೂರು
3) ಶ್ರೀ ಕೆ.ಇ ಜಯರಾಂ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ.
4) ಮೇಲ್ವಿಚಾರಕರು, ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5) ಮಾಹಿತಿ ಕೇಂದ್ರ/ಶಾಖಾ ರಕ್ಷಕ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.